# ಕೂಡಿದವರ ಕೊಂದು ಶಾಪಕ್ಕೊಳಗಾದ ಪಾಂಡು

**ವೈಶಂಪಾಯನ:** ಹಾವು, ಮೃಗ ತುಂಬಿದ ದೊಡ್ಡ ಕಾಡಲ್ಲಿ ನಡೀತಾ ರಾಜ ಪಾಂಡು ಮೈಥುನ ಧರ್ಮದಲ್ಲಿ ತೊಡಗಿದ್ದ ಒಂದು ಜಿಂಕೆ ಸಲಗಾನ ಕಂಡ.

ಹೆಣ್ಣಿನ ಸಮೇತ ಅದಕ್ಕೆ ನಾಟುವ ಹಾಗೆ ಬಂಗಾರದ ಗರಿ, ಚೆಲುವಾದ ರೆಕ್ಕೆ ಇರೋ ಮೊನಚಾದ ಐದು ಬಾಣದಲ್ಲಿ ಗುರಿ ಇಟ್ಟು ಟಕ್ಕನೆ ಹೊಡೆದ.

**ಜನಮೇಜಯ:** ಅದಿತ್ತಲ್ಲ, ಅದು ಋಷಿಯ ಮಗ. ತಪಸ್ಸಿನ ಸಂಪತ್ತೇ ಇತ್ತು ಅದಕ್ಕೆ. ಆದರೇನು ನೆಲಕ್ಕೆ ಬಿತ್ತು. ಆದರೂ ತನ್ನ ಹೆಣ್ಣಿಗೆ ಕೂಡಿಕೊಂಡೇ ಇತ್ತು. ಮನುಷ್ಯರ ಭಾಷೇಲಿ ನರಳುತಾನೇ ಮಾತಾಡಿತು.

**ಜಿಂಕೆ:** ಕೆಡುಕು ಮಾಡೋದರಲ್ಲೇ ಖುಷಿ ಪಡೋನೂ, ಕೋಪ ಬೆದೆ ಹತ್ತಿ ಬುದ್ಧಿ ಕಳಕೊಂಡವನೂ ಇಂಥ ಕಟುಕನ ಕೆಲಸ ಮಾಡಲ್ಲ, ತಿಳಿವಳಿಕೆ ವಿಧೀನ ನುಂಗಲಾರದು. ವಿಧೀನೆ ತಿಳಿವಳಿಕೇನ ನುಂಗಿ ಹಾಕತ್ತೆ. ವಿಧಿ ಅಡ್ಡ ಹಾಕಿದ್ದನ್ನ ತಿಳಿವಳಿಕಸ್ಥ ದಕ್ಕಿಸಿಕೊಳ್ಳೋದು ಉಂಟು. ನಿನ್ನದು ಧರ್ಮಾತ್ಮರ ಮನೆತನ. ನಿನ್ನ ಬುದ್ಧೀಗೆ ಈ ದುರಾಸೆ ಹೇಗೆ ಬಂತು?

**ಪಾಂಡು:** ರಾಜರಿಗೆ ಶತ್ರೂನೂ ಒಂದೇ ಜಿಂಕೇನೂ ಒಂದೇ. ಕೊಲ್ಲತಕ್ಕದ್ದು. ಮೋಹಕ್ಕೆ ಬಿದ್ದು ನನ್ನ ಸುಮ್ಮನೆ ಬಯ್ಯುತೀಯ. ಮರೆಮೋಸ ಮಾಡಿಯಾದರೂ ಜಿಂಕೇನ ಕೊಲ್ಲು ಅಂತಲೆ ಧರ್ಮ ಹೇಳೋದು, ಇದು ನಿನಗೂ ಗೊತ್ತು. ಅಂದಮೇಲೆ ನನ್ನನ್ನೇಕೆ ಬಯ್ಯುತೀಯ?

ಅಗಸ್ತ್ಯ ಒಂದು ಸಾರಿ ಸತ್ರ ನಡೆಸಿ, ಕಾಡಿಗೆ ಹೋಗಿ ಅಲ್ಲಿರೋ ಜಿಂಕೆಗಳ ಮೇಲೆಲ್ಲ ಜೀರು ಸಿಂಪರಿಸಿ ದೇವರಿಗೆ ಎಡೆ ಮಾಡಿಬಿಟ್ಟ. ಇದಕ್ಕೆ ಧರ್ಮದಲ್ಲೇ ಪ್ರಮಾಣ ಇದೆ. ಅಗಸ್ತ್ಯನ ಪ್ರಕಾರ ನಿನ್ನಂಥವರು ಅವನ ಮಾಟ–ಮಂತ್ರದ ಅಭಿಚಾರಕ್ಕೆ ಬಲಿಕೊಡಬೇಕಾದವರು. ಸುಮ್ಮನೆ ನನ್ನ ಯಾಕೆ ಹಳಿಯುತ್ತೀಯಾ?

**ಜಿಂಕೆ:** ಶತ್ರುವಿನ ಮೇಲೆ ಕೂಡಾ ಯಾರೂ ಹಿಂದೆ ಮುಂದೆ ನೋಡದೆ ಬಾಣ ಬಿಡಲ್ಲ, ಸರಿಯಾದ ಕಾಲ ನೋಡಿ ಕೊಲ್ತಾರೆ.

**ಪಾಂಡು:** ಶತ್ರು ಅಂದರೆ ಎಚ್ಚರದಲ್ಲಿರೋ ನೋ ಮೈಮರೆತಿರೋನೊ? ಕಂಡರೆ ಮೊನಚಾದ ಬಾಣದಿಂದ ಕೊಲ್ಲೋದೇ ಅಲ್ಲವಾ?

**ಜಿಂಕೆ:** ಅದಲ್ಲ, ನೀನು ಜಿಂಕೇನ ಕೊಂದೆ ಅಂತಲ್ಲ ಬಯ್ದದ್ದು. ನಾನು ಕೂಡಿ ಮುಗಿಸೋವರೆಗೆ ನೀನು ಕಾಯಬೇಕಿತ್ತು. ಅರ್ಧದಲ್ಲೇ ಕಟುಕ ಆಗಬಾರದಿತ್ತು. ಎಲ್ಲಾ ಜೀವಕ್ಕೂ ಆಸೆ ಅಲ್ಲವಾ ಅದು.

ಕಾಡಲ್ಲಿ ಮೈಥುನ ಮಾಡತಿರುವಾಗ ಕೊಲ್ಲತಾರೇನಯ್ಯ, ಎಂಥಾ ಜೀವಕ್ಕೂ ಹಿತ ಉಂಟಾಗೋ ಸಮಯ ಅಲ್ಲವಾ ಅದು.

ಈ ಹೆಣ್ಣು ಜಿಂಕೇ ಜೊತೆ ಸಂತೋಷದಿಂದ ಮೈಥುನ ನಡೆಸತಾ ಇದ್ದೆ. ಪುರುಷಾರ್ಥ ಅಲ್ಲವಾ ಅದು. ಫಲ ತುಂಬೋ ಕಾಲಕ್ಕೆ ವಿಫಲ ಮಾಡಿಬಿಟ್ಟೆಯಲ್ಲಾ.

ನಿಮ್ಮದು ಸೀದಾ ಸಾದಾ ಪೌರುಷದ ಮನೆತನ. ಅದರಲ್ಲಿ ಹುಟ್ಟಿದೋನು ನೀನು. ಅದಕ್ಕೆ ಲಾಯಕ್ಕಲ್ಲದ ಕೆಲಸ ಮಾಡಿಬಿಟ್ಟೆ. ಕಟುಕತನ ಇದು. ಮೂರು ಲೋಕಾನೂ ತೆಗಳುವಂಥ ಕೆಲಸ. ಒಳ್ಳೆ ಹೆಸರು ತರಲ್ಲ. ಅಧರ್ಮಿಷ್ಠರ ಕೆಲಸ ಇದು.

ಶಾಸ್ತ್ರ ಧರ್ಮ ಎಲ್ಲ ಈ ವಿಷಯಕ್ಕೆ ಏನು ಹೇಳತ್ತೆ ಅಂತಲೂ ಗೊತ್ತು. ನೋಡೋಕೆ ದೇವರ ಥರ ಇದೀಯ. ಆದರೆ ನರಕದವರ ಕೆಲಸ ಇದು. ಬಿಡು, ಕಟುಕರನ್ನ ಪಾಪಿಗಳನ್ನ ಮಟ್ಟ ಹಾಕಬೇಕಾದ ನೀನು ಇಲ್ಲಿಗೆ ಬಂದು ನನ್ನ ಯಾಕಪ್ಪಾ ಕೊಂದೆ?

ನಾನು ಮುನಿ. ಹಣ್ಣು ಹಂಪಲು ತಿಂದುಕೊಂಡು ಜಿಂಕೆಯ ರೂಪ ಧರಿಸಿ ಕಾಡಲ್ಲಿರೋನು. ಸದಾ ಶಾಂತವಾಗಿರೋನು. ನನ್ನನ್ನ ನೀನು ನೋಯಿಸಿದೆ ಅಲ್ಲವಾ – ಅದೇ ನೋವು ನಿನಗೂ ಬರಲಿ.

ಕಟುಕತನ ಮಾಡಿಬಿಟ್ಟೆ. ನಿನಗೂ ಬೆದೆ ಬಂದು ಕೂಡಿದ ಕೂಡಲೇ ಎಚ್ಚರ ತಪ್ಪಿ ನಿನ್ನ ಜೀವಕ್ಕೆ ಕೊನೆ ಬರಲಿ.

ನಾನು ಕಿಂದಮ ಅಂತ. ತಪಸ್ಸನ್ನೇ ಮನಸಾಗಿ ಮಾಡಿಕೊಂಡ ಮುನಿ ಕಣಯ್ಯ. ಮನುಷ್ಯರ ರೂಪದಲ್ಲಿ ನಾಚಿಕೆಯಾಗಿ ಈ ಹೆಣ್ಣು ಜಿಂಕೆ ಜತೆ ಮೈಥುನ ಮಾಡತಿದ್ದೆ. ನಾನೂ ಜಿಂಕೆ ಆಗಿ ಹೆಣ್ಣು ಜಿಂಕೆ ಜತೆ ಒಳಕಾಡಲ್ಲಿ ಓಡಾಡತಿದ್ದೆ.

ಬೆದೇಲ್ಲಿದ್ದ ಜಿಂಕೆಯ ಮೈಯ ನನ್ನನ್ನ ಕೊಂದೆಯಲ್ಲ ಮೂಢ. ಇದೇ ಥರದ ಸ್ಥಿತಿ ನಿನಗೂ ಬರಲಿ. ಬೆದೆ ಬಂದು ನಿನ್ನ ಇಷ್ಟದವಳ ಜತೆ ಕೂಡಿಕೊಂಡ ಗಳಿಗೇಲೆ ನೀನು ಪ್ರೇತ ಆಗು.

## ಪಾಂಡು ಪ್ರಾಣಪಕ್ಷಿ ಹಾರಿಹೋಯ್ತು

ಕಾಡು ಪುಷ್ಪಿತವಾಗುವ ಮಧುಮಾಸ ಅದು. ಜಗತ್ತಿನ ಜೀವಿಗಳೆಲ್ಲಾ ಮೋಹ–ಸಮ್ಮೋಹನಕ್ಕೆ ಒಳಗಾಗುವ ಕಾಲ.

ಪಾಂಡು ಕಾಡಿನಲ್ಲಿ ಅಲೆದಾಡುತ್ತಿದ್ದ. ಮುತ್ತುಗ, ತಿಲಕ, ಮಾವು, ಸಂಪಗೆ ಇನ್ನೂ ಬಗೆ ಬಗೆ ಮರಗಳು ಹೂವು ಹಣ್ಣು ತುಂಬಿಕೊಂಡು ನಿಂತಿದ್ದವು. ನೀರಿನ ನೆಲೆಗಳಲ್ಲೆಲ್ಲಾ ತಾವರೆ ಅರಳಿತ್ತು. ನೋಡುತ್ತಾ ಪಾಂಡುವಿನ ಎದೆಯಲ್ಲಿ ಮನ್ಮಥ ಸಂಚಾರವಾಯಿತು.

ತುಂಬು ಹಿಗ್ಗಿನಿಂದ ಅಮರನ ಹಾಗೆ ಓಡಾಡುತ್ತಿದ್ದ ಪಾಂಡು, ಅವನಿಗೆ ಹತ್ತಿರದಲ್ಲೇ ಮಾದ್ರಿ ಒಂಟಿಯಾಗಿ ಸಿಂಗಾರದ ಉಡುಪು ತೊಟ್ಟು ಸುಳಿದಾಡುತ್ತಿದ್ದಳು.

ಅವಳಿಗೆ ಇನ್ನೂ ಚಿಕ್ಕ ಪ್ರಾಯ. ಮೈಮೇಲೆ ತೆಳುವಾದ ಉಡುಪು, ಅವಳು ಒಂಟಿಯಾಗಿದ್ದಳು. ಪಾಂಡುವಿಗೆ ಆಸೆಯನ್ನು ಹತ್ತಿಕ್ಕಲು ಆಗಲೇ ಇಲ್ಲ. ಕಾಮನ ಕೈಗೆ ಸಿಕ್ಕಿಕೊಂಡು ಬಿದ್ದ. ನೋಡುತ್ತಾ ನೋಡುತ್ತಾ ಕಾಮ ಕಿಚ್ಚಿನ ಹಾಗೆ ಏರುತ್ತಾ ಹೋಯಿತು.

